Regd No BG 155

Sri "SATYAVADI"
— DAILY —
MYSORE 4
46 th Year

Protect the cow

— ಶ್ರೀ —

# ಸತ್ಯವಾದಿ
SATYAVADI

ಸ್ಥಾಪಕರು— ಅಂತುನೆ ಸಂಸ್ಥೇದಾರ್ ಎಂ. ಎ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ.

13—1—1962

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

## ವಿಶೇಷ ಸಭೆ

ದೇವರಾಜ ಮಾರ್ಕೆಟ್ಟಿನ ವರ್ತಕರ ಬಾಡಿಗೆ ಪುನರ್ವಿಮರ್ಶೆಗೆ ಬೇಡಿಕೆ ಅರ್ಜಿ ಈ ಮಾಹೆ 18 ರಂದು ಮೈಸೂರು ಪೌರ ಸಭೆ ವಿಶೇಷ ಸಭೆ ಸೇರಿ ಪರಿಶೀಲಿಸುವದು

## ಗಣರಾಜ್ಯ ದಿನಾಚರಣೆ

ಜನವರಿ 26 ರಂದು ಮೈಸೂರು ಪೌರ ಸಭೆ ಅಶ್ರಯದಲ್ಲಿ ಗಣರಾಜ್ಯ ದಿನಾಚರಣೆ ಹಿಂದಿನ ವರ್ಷಗಳಂತೆ ನಡೆಯುವದು ಈ ಉತ್ಸವವನ್ನು ಯಶಸ್ವಿಗೊಳಿಸಬೇಕೆಂದು ಕೋರಿದೆ

## ನೊಂದವರಿಗೆ ನೆರವು

ಪೆರುವಿನಲ್ಲಿ ಹಿಮಪಾತದಿಂದ 3 ಸಹಸ್ರ ನುಂದಿ ಮರಣಹೊಂದಿರುವರ್ಯ ಸೊರವರಿಗೆ ಸಹಾಯಮಾಡುವದಾಗಿ ವಿಶ್ವಸಂಸ್ಥೆ ಸಧಾನಕಾರ್ಯದರ್ಶಿ ಯು ಥಾಂಟರು ತಿಳಿಸಿರುವರು

## ಜೀರ್ಣೋದ್ಧಾರ ನಿಧಿ

ಶ್ರೀ ಶೈಲ ದೇವಾಲಯದ ಜೀರ್ಣೋದ್ಧಾರಕ್ಕಾಗಿ ಮಂದಾಸಿನ ದಿನಪತ್ರಿಕೆ ಆಂಧ್ರ ಪತ್ರಿಕಾ ರೂ 1 ಲಕ್ಷ ಸಂಗ್ರಹ ಮಾಡಿ ಹೈದರಾಬಾದಿನಲ್ಲಿ ಆಂಧ್ರ ಮುಖ್ಯ ಮಂತ್ರಿ ಶ್ರೀ ಡಿ ಸಂಜೀವಯ್ಯ ನವರಿಗೆ ಅರ್ಪಿಸಿತು

## ನಿಯೋಗದ ಆಗಮನ

ಭಾರತದಲ್ಲಿ 3 ನೆಯ ಮಹಾ ಚುನಾವಣೆಯ ವೀಕ್ಷಣೆಗಾಗಿ ನ್ಯೂಜಿಲೆಂಡು ಪಾರ್ಲಿಮೆಂಟರಿ ನಿಯೋಗ ಭಾರತಕ್ಕೆ ಆಗಮಿಸುವದು

oo

ಜಬ್ಬಲ್ಪುರದಿಂದ ಒಂದಿರುವ ವಂದಿ ಪ್ರಕಾರ ಮಹಾಜಿ ಶೇಸಿಲ್ ನಿಯೋಜ್ಯ ದಲ್ಲಿನ ಎಂಡು ಗುಂಪುಗಳವರಲ್ಲಿ ಹೊಡೆದಾಟವಾಗಿ 6 ಜನರು ಗಾಯಗೊಂಡಿರುವರು ಈ ಪೈಕಿ ನಾಲ್ವರಿಗೆ ತೀಂಬಾ ಗಾಯವಾಗಿದೆ

## ತೆರಿಗೆ ಏರಿಕೆ

ಪಶ್ಚಿಮ ಬಂಗಾಳದಲ್ಲಿ ಏನಿವಾರುಂ ದಿರಗಳಲ್ಲಿ 20, ರಂದ 25 ನಯೆ ಪೈಸೆ ಟಿಕೇಟುಗಳಿಗೆ ವಸಂಜನ ತೆರಿಗೆ ಶೇಕಡ 25 ಹೆಚ್ಚಿದೆ 51 ರಿಂದ 1 ರೂ ವರೆಗಿನ ಟಿಕೆಟಿಗೆ ವಸಂಜನ ತೆರಿಗೆ ಶೇಕಡ 75 ಹೆಚ್ಚಿದೆ ಈ ಮಾಹೆ 18 ರಿಂದ ಈ ಕಾನೂನು ಜಾರಿಗೆ ಬರುವದು.

## ದರೋಡೆ

ಪಾಟ್ನಾದ ಮಧ್ಯದಲ್ಲಿರುವ ಖಜಾಂಚಿ ರಸ್ತೆಯಲ್ಲಿರುವ ಚಿನ್ನದ ಬೆಳ್ಳಿ ಅಂಗಡಿಗೆ ಆಯುಧಧಾರಿ ಏಸರು ನುಗ್ಗಿ ರೂ 10 ಸಾವಿರ ಮೌಲ್ಯದ ಆಭರಣ ಹಾಗೂ ನಗದನ್ನು ದರೋಡೆ ಮಾಡಿದರು

## ಕಾಶ್ಮೀರದ ಪ್ರಶ್ನೆ

ಕಾಶ್ಮೀರ ಪ್ರಶ್ನೆ ಪರಿತೀಲಿಸಬೇಕೆಂದು ಪಾಕಿಸ್ತಾನ ಭದ್ರತಾ ಸಮಿತಿಗೆ ಅರ್ಜಿ ಕೊಟ್ಟಿರುವದಾಗಿ ವಿಶ್ವಸಂಸ್ಥೆ ವಾರ್ತೆ

ಈ ಪ್ರಶ್ನೆ ಬಂದರೆ ರಷ್ಯ ಭಾರತಕ್ಕೆ ಬೆಂಬಲಿಸುವದೆಂದು ದೆಹಲಿ ವಾರ್ತೆ ಕಾಶ್ಮೀರ ಭಾರತದ್ದೆಂದು ರಷ್ಯದ ನಿಲುವು

### ಸಾದರ ಸ್ವೀಕಾರ

ಮೈಸೂರು ಕಾಳಮ್ಮ ಗುಡಿ ರಸ್ತೆಯಲ್ಲಿರುವ ಸುಪ್ರಸಿದ್ಧ ಜೆ ಎಂ ಮ್ಯೂಸಿಕ್ ಕಲ್ ಸ್ಟೋರ್ಸಿನವರು ಕಳಿಸಿರುವ ಈ ವರ್ಷದ ಅಂದವಾದ ಕ್ಯಾಲೆಂಡರನ್ನು ಸಾದರದಿಂದ ಸ್ವೀಕರಿಸಿದ್ದೇವೆ

oo

ಕಲ್ಕತ್ತಾದಲ್ಲಿರುವ 75 ಚಿತ್ರಮಂದಿರಗಳಲ್ಲಿ ನಿತ್ಯ 1 ಲಕ್ಷ ಮಂದಿ ಸಿನಿಮಾ ವೀಕ್ಷಣೆ ಮಾಡುವರೆಂಬ ಅಂದಾಜಿದೆ

★

ಯುಗಾಸ್ತಾವಿಯಾದ ಬಿಟ್ಟಿಯಾ ದಲ್ಲಿ ಭೂಕಂಪವಾಗಿ ತುಂಬಾ ನಷ್ಟವಾಗಿದೆ 2 ಸಾವಾಗಿದೆ

## ಪತ್ರಿಕೆ ನಾಶ

ಕಳೆದ 28 ದಿವಸಗಳಿಂದ ಮುಷ್ಕರ ಹೂಡಿರುವ ಕರ್ನೂಲಿನ ಕಾಲೇಜಿನ ದ 400 ವಿದ್ಯಾರ್ಥಿಗಳು ಪತ್ರಿಕೆ ಹಂಚುವವರಿಂದ ಮೊಸ್ಕೆ ಪತ್ರಿಕೆಗಳನ್ನು ಕಿತ್ತುಕೊಂಡು ಹರಿದುಹಾಕಿದರು ತೊಂದರೆಗಳನ್ನು ಕಪ್ಪಿಸುವವರಿಗೆ ಕಾಲೇಜಿಗೆ ಹೋಗದಿರುವ ನಿರ್ಧಾರವನ್ನು ವಿದ್ಯಾರ್ಥಿಗಳು ಕೈಗೊಂಡರು

## ಅತೃಪ್ತರ ಸಭೆ

ರಾಜಸ್ಥಾನದ ಅತೃಪ್ತ ಕಾಂಗ್ರೆಸಿಗರ ಸಮ್ಮೇಳನ ಮುಗಿಯುತ್ತಿದ್ದಂತೆ ಜಯಪುರ ವಾರ್ತೆ ಮಾಜಿ ಮುಖ್ಯ ಮಂತ್ರಿ ಶ್ರೀ ಜಯ ನಾರಾಯಣ ವ್ಯಾಸರು ಅಧ್ಯಕ್ಷತೆ ವಹಿಸಿದ್ದರು ಬರಬರದ ವಿರೋಧ ಕಾಂಗ್ರೆಸಿನ ಅದರ್ಶಗಳಿಗೆ ವಿರೋಧವಾಗಿರುವ ಕಾಂಗ್ರೆಸಿಗರನ್ನು ವಿರೋಧಿಸುವ ನಿರ್ಣಯ ಪ್ರಾಗಿದೆ

### ಆಂಧ್ರದ ನಾಯಕತ್ವ

ನವ ದೆಹಲಿಯಿಂದ ಬಂದಿರುವ ವರದಿಯ ಪ್ರಕಾರ ಮಹಾ ಚುನಾವಣೆ ಆದ ನಂತರ ಆಂಧ್ರ ನಾಯಕತ್ವ ವಹಿಸಿಕೊಳ್ಳಲು ಕಾಂಗ್ರೆಸು ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ಆಂಧ್ರಕ್ಕೆ ವಾಪಸಾಗುವರು.

oo

ಭಾರತ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀ ಅಜಯ್‌ಘೋಷ ರವರು ಈ ಮಾಹೆ 20 ನೆಯ ತಾ|| ನಿಂದ 3 ದಿವಸಗಳ ವರೆಗೆ ಮೈಸೂರು ರಾಜ್ಯದಲ್ಲಿ ಪ್ರವಾಸ ಮಾಡುವರು. 21 ರಂದು ಮೈಸೂರು ನಗರಕ್ಕೆ ಬರುವರು.

oo

ಪ್ರಧಾನಿ ಪಂ|| ನೆಹರು ವಿರುದ್ಧ ಪಿ ಎಸ್. ಪಿ ಸ್ಪರ್ಧಿಸುವದಿಲ್ಲ, ಕೆಲವು ನಾಯಕರಿಗೆ ನಾವು ಗೌರವವನ್ನು ಕೊಡಬೇಕು ಎಂದು ಪಿಎಸ್ಪಿ ಅಧ್ಯಕ್ಷ ಶ್ರೀ ಅಶೋಕ ಮೆಹತ ಜಯಪ್ರದಲ್ಲಿ ನುಡಿದರು

## ವಿವಿಧ ವಿಷಯಗಳು

ಗೋವಾದಲ್ಲಿ ಈಗಿರುವ ಪಕ್ಷವುಸ್ತು ಕಗಳೇ ಸಧ್ಯ ಮುಂದುವರಿಯುವದೆಂದು, ಮುಂದೆ ಪೋರ್ಚುಗೀಸು ಭಾಷೆ ಏಚ್ಚಿಕ ಭಾಷೆಯಾಗಿರುವದೆಂದು ಪಂಚಿಂ ವಂದಿ

ಶಾಂತಿಗಾಗಿ ಅವಿರಿಕಾ ಶ್ರಮಿಸುವದೆಂದ ಅಧ್ಯಕ್ಷ ಕೆನೆಡಿ ತಿಳಿಸಿರುವದಾಗಿ ವಾಷಿಂಗ್ಟನ್ ವಾರ್ತೆ

ಶ್ರೀರಂಗಾದ ಭೀಮಪ್ಪ ನಾಯಕರ ಹಾಗೂ ಮಂಗಳೂರಿನ ಸೂರ್ಯನಾರಾಯಣ ಅಡಿಗರು ಚುನಾವಣೆಯಲ್ಲಿ ಆರೋಗ್ಯ ನಿಮಿತ್ತ ಸ್ಪರ್ಧಿಸುವದಿಲ್ಲವೆಂದು ಪ್ರದೇಶ ಕಾಂಗ್ರೆಸು ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಬೆಂಗಳೂರಿನಲ್ಲಿ ತಿಳಿಸಿದ್ದಾರೆ

ಕಾಂಗ್ರೆಂದ ಜಿಲ್ಲಾಧಿಕಾರಿ ಶ್ರೀ ನಾರಾಯಣರಾಯರು ರಾಜ್ಯದ ಪರಿಹಾರ ನಿಧಿಗೆ ಶ್ರೀ ಜತ್ತಿಯವರ ಹಸ್ತ ರೂ 20 ಸಹಸ್ರ ಕೊಟ್ಟರು

ವೈಸೂರು ರೇಷ್ಮೆ ಕಾರ್ಖಾನೆ ಬಳಿ ಮನೆಯೊಂದರಲ್ಲಿದ್ದ ಜಯಮ್ಮ ನೆಂಬವಳನ್ನು ಅಪಹರಿಸಿದ ಸಂದರ್ಭದಲ್ಲಿ ಆಕೆ ಗಂಡರಾಜು ಇತ್ತ ದೂರಿನ ಮೇಲೆ ಧರ್ಮರಾಜನೆಂಬ ಬಡಗಿಯು ಒಂಧಸವಾಗಿದೆ

ಬೆಂಗಳೂರು ಲಾಲಿಬಾಗಿನಲ್ಲಿ ಸಣ್ಣ ಹಣ್ಣಿನ ಗಿಡ ಬೆಳೆಸುವದು ಯಶಸ್ವಿಯಾಗಿರುವದ. ಆ ಹಣ್ಣಿನ ಪ್ರಾಕೃತಿಕ ವಿವಿಧ ಜೀವಾಣುಗಳಿರುವ ಹಣ್ಣು ಎನ್ನಬಹುದು ಹಣ್ಣಿನ ಹೆಸರು ಬಾರ್ಬೊದಾಸ್. ಗಿಡ ಕಾಫಿ ಗಿಡವನ್ನು ಹೋಲುವದು. ಈ ಹಣ್ಣಿನಲ್ಲಿ ಎ ಬಿ ಸಿ ಜೀವಾಂಶಗಳು ಇವೆ

ಪ್ರವಾಸವನ್ನು ಪ್ರೋತ್ಸಾಹ ಮಾಡುವ ಸಲುವಾಗಿ ಪ್ರವಾಸೀ ಕಾಂಗಿಗಳಿಗೆ ಸ್ವತಂತ್ರ ಓಡಾಟಕ್ಕೆ ಭಾರತ ಸರ್ಕಾರ ಅವಕಾಶ ಮಾಡುವದಾಗಿ ನವ ದೆಹಲಿ ವಾರ್ತೆ.

### ನಾಳೆಯ ಪಂಚಾಂಗ

ಆಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ

14 ಸಪ್ತಮಿ ಅಶ್ವಿನಿ

## ಸಂಗದ ಪ್ರತಿಫಲ

[ ಬರೆದವರು— ಕೆ. ಪಂಚೇಶ್ವರ ಭಟ್ಟರು, ಶಾಂತಿಹಕ್ಕಲು ]

( ನಿನ್ನೇ ಸಂಚಿಕೆಯಿಂದ ಮುಂದಕ್ಕೆ )

ಇದನ್ನು ದೂರದಿಂದ ನೋಡುತ್ತಾ ನಿಂತಿದ್ದ ಯಾತ್ರಿಕರು ಬೆರಗಾದರು : ಇತ್ತ ಕೆಲವು ಯಾತ್ರಿಕರು ದೇವಸ್ಥಾನದಲ್ಲಿ ನೂಕುನುಗ್ಗಲಲ್ಲಿ ನಿಂತು ಎಶ್ವೇಶ್ವರನ ದರ್ಶನ ಪಡೆದರು : ಆದರೆ ಅಲ್ಲಿ ಕಂಡ ದೃಶ್ಯವಾವುದೂ ಏನು ? ಶಿವ ಪಾರ್ವತಿಯುವರ ಪಕ್ಕದಲ್ಲಿಯೇ ಆ ಕಳ್ಳನೂ ನಿಂತಿದ್ದನು; ಇವರಿಗೆ ಏನೂ ಹೊಳೆ ಹುಲಿಲ್ಲ : ಆಶ್ಚರ್ಯ ಉಂಟಾಯಿತು, ಕಳವಳ ಉಂಟಾಯಿತು ; ತನ್ನ ಮೂಢ ಭಕ್ತಿಗಿಂತ ಆ ಕಳ್ಳನ ಪವಿತ್ರ್ಯತೆಯು ಹೃದಯ ಭಕ್ತಿ : ಇವರಿಗೆ ಛಗ ಅರಿವಾಯಿತು. ಆ ಕಳ್ಳನಿಗೆ ಶಿವಪಾರ್ವತಿಯುವರು ಸ್ವರ್ಗ ಸುಖವನ್ನು ಕೊಟ್ಟರು.

ಆದುದರಿಂದ ನಾವು ಅರಿಯುದೇ ಮಾಡಿದ ಪಾಪವನ್ನು ಪರಿಹರಿಸಿಕೊಳ್ಳ ಬಹುದು ; ಅದು ಪಾಪ, ಇದು ಪುಣ್ಯ, ಇದು ಹಿಂಸೆ, ಅದು ಅಹಿಂಸೆ, ಎಂದರಿತು ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತವಿಲ್ಲ ; ಆದ್ದರಿಂದ ನಾವು ಯಾವಾಗಲೂ, ನವ್ಮ ಕೈಲಾದಷ್ಟು ಬಡಬಗ್ಗರಿಗೆ ಸಹಾಯ ಮಾಡಬೇಕು : ದೇವರಲ್ಲಿ ಭಕ್ತಿ, ಪಶುಪಕ್ಷಿಗಳಲ್ಲಿ ದಯೆ, ಹಿರಿಯರಲ್ಲಿ ಗೌರವ. ಇವೆಲ್ಲವನ್ನೂ ತಿಳಿದುಕೊಂಡು ನಡೆದಲ್ಲಿ ನಮಗೆ ಉತ್ತಮವಲ್ಲವೇ ?

ದಯೆಯೇ ದೇವರು ; ದಯೆಯುಳ್ಳ ಹೃದಯವೇ ದೇವಾಲಯವು

ಸಜ್ಜನ ಸಂಗದಿಂದ ಎಂತಹ ದುಷ್ಟ ಪಾಪಿಷ್ಟನಾದರೂ ಸಹ ಉತ್ತಮನಾಗ ಬಹುದು : ಅಲ್ಲದೆ ಸಜ್ಜನರೂ ಸಹ ದುಷ್ಟರ ಸಂಗದ ಸೇವರೆ .... ದುಷ್ಟರೂ ಆಗಬಹುದು : ಅಲ್ಲವೇ, ಹೇಳಿಲ್ಲವೇ ಸರ್ವಜ್ಞಮೂರ್ತಿ— ಸಜ್ಜನರ ಸಂಗವದು ಹೆಜ್ಜೇನ ಸವಿದಂತೆ, ದುರ್ಜನರ ಕೂಡ ವಡನಾಟ ಒಚ್ಚಲ ರೊಚ್ಚಿನಂತಿಹುದು ಸರ್ವಜ್ಞ. ಸಕಲರೂ ಸಜ್ಜನರ ಸಂಗವನ್ನೇ ಮಾಡಿರಿ ಓಂ ಶಾಂತಿ.

## ಸಂಸ್ಥೆಯ ವಿಸರ್ಜನೆಗೆ ಆಜ್ಞೆ

ಗೋವಾದ ವಿಲಿಟರಿ ಗವರ್ನರಾದ ಮೆ || ಜನರಲ್ ಕಾಂಡೆತ್‌ರವರು ಘೋಷಣೆಯೊಂದನ್ನು ಹೊರಡಿಸಿ ' ಯೂನಿಯೋ ನಾತನಲ್ ' ಎಂಬ ಹೆಸರಿನ ಸಂಸ್ಥೆಯನ್ನು ಈ ಕ್ಷಣವಿಂದಲೇ ವಿಸರ್ಜಿಸಲಾಗಿದೆಯೆಂದು ತಿಳಿಸಿದ್ದಾರೆ.

## ಅಮೇರಿಕಾದಲ್ಲಿ ವಿದ್ಯಾರ್ಥಿ ಜೀವನ

ಮದರಾಸು — ತಾ || 15 ರ ಸಂಜೆ ಮಂಗಳೂರಿನ ಕೆನರಾ ಹೈಸ್ಕೂಲಿನ ಭವನೇಂದ್ರ ಹಾಲ್‌ನಲ್ಲಿ ' ಅಮೇರಿಕಾದಲ್ಲಿ ವಿದ್ಯಾರ್ಥಿ ಜೀವನ ' ಎಂಬ ಸಚಿತ್ರ ಪ್ರದರ್ಶನವು ರೆವರೆಂಡ್ ಮಾಂತೇರೋರಂರವರಿಂದ ಉದ್ಘಾಟಿಸಲಾಗುವುದು

ಮದರಾಸು — ತಾ || 22 ರ ಸಂಜೆ ಉಡುಪಿಯ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನಲ್ಲಿ ' ಅಮೇರಿಕಾದಲ್ಲಿ ವಿದ್ಯಾರ್ಥಿ ಜೀವನ ' ಎಂಬ ಸಚಿತ್ರ ಪ್ರದರ್ಶನವು ಡಾ || ಅಡ್ಯೆಯವರಿಂದ ಉದ್ಘಾಟಿಸಲಾಗುವುದು.

---

ಸಂಕ್ರಾಂತಿ ಹಬ್ಬದ ಪ್ರಯುಕ್ತ ಸೋಮವಾರ ಸತ್ಯವಾದಿ ಕಾರ್ಯಾಲಯಕ್ಕೆ ರಜ.


# SHAKTI SUDHA

A Superb Tonic



## ವುಡ್‌ಲ್ಯಾಂಡ್ಸ್ ನೈಭವ 6 ನೇ ವಾರ

## ಜಬ್ ಪಾರ್ ಕಿಸೀಸೆ ಹೋತಾಹೆ

ದೇವ್‌ಆನಂದ್, ಆಶಾ ಪಂಕಿಖ್ ಮತ್ತಿರ ಪ್ರಖ್ಯಾತ ತಾರೆಯರು ಪಾತ್ರವಹಿಸಿರುವ

ಅತ್ಯಂತ ಮನರಂಜನ ಹಿಂದಿ ಚಿತ್ರ [ ದಿನವಹಿ 3 ಪ್ರದರ್ಶನಗಳು

## ಅಪೆರಾ— ಯಶಸ್ವಿ 3 ನೇ ವಾರ

## ನಾಗಾರ್ಜುನ (ಕನ್ನಡ)

ತಾರಾಗಣ— ರಾಜಕುಮಾರ್, ನಾಗಯ್ಯ, ವಂಚಲಕ್ಷ್ಮಿ, ಹರಿಣಿ, ನರಸಿಂಹರಾಜು ಕಾಂತಾ ರಾವ್, ರಾಜನಾಲ [ ದಿನವಹಿ 3 ಆಟಗಳು ]




ಅಮೇರಿಕಾಕ್ಕೆ ಭೇಟಿ ಸಂಬಂಧದ ಚಿತ್ರಗಳು


## Help ' The Gorakshana '

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ



Edited, Printed & Published by the Proprietor, Dharma Prachara Nirata M. S. Krishna Rao, at the Sahyadri Press Chamarajapuram, Mysore 4.